ಶಾಕ್ಯರ ಅರಸರ ಪುತ್ರ ಸಿದ್ಧಾರ್ಥನು ಬುದ್ಧನಾದ ರಾತ್ರಿಯನ್ನು ಕುವೆಂಪು ಅವರು 'ಮಹಾರಾತ್ರಿ' ನಾಟಕವಾಗಿ ರಚಿಸಿದ್ದಾರೆ (1913). ಪೀಠಿಕಾ ದೃಶ್ಯದಲ್ಲಿ ಯಕ್ಷ ಕಿನ್ನರರಿಬ್ಬರ ಸಂಭಾಷಣೆಯಲ್ಲಿ 'ಸಗ್ಗದ ಒಲವು ಇಳೆಗಿಳಿವ ರಾತ್ರಿ! ಸತ್ಯ ಮಿಥ್ಯೆಯನೊದೆವುದಿಂದು!' ಎಂದು ಹೇಳುತ್ತ, ಆ ರಾತ್ರಿಯ ಹರ್ಷದ ಅರುಣೋದಯದ ಕಿರಣವನ್ನು ಯಕ್ಷ ಹೀಗೆ ತಿಳಿಸಿದ್ದಾನೆ:

'ಯಜ್ಞ ಯಾಗಾದಿಗಳ
ಹಿಂಸೆಯಲಿ ಬೆಂದು, ಕೃತ್ರಿಮದ ವೈದಿಕರ
ದೌಷ್ಟ್ಯದೊಳು ನೊಂದು, ಒಣವೇದ ಪಂಡಿತರ
ವಾದದೊಳು ಮುಳುಮುಳುಗಿ ಗೋಳಿಡುವ
ಭಾರತಿಯ ಪುಣ್ಯಗಗನದ ಪೂರ್ವದೊಳು,
ನೋಡು, ಹರ್ಷದರುಣೋದಯವು
ಶೋಭಿಸುವುದೆಂತು!'

### ನಾಳೆ ಎಂದಿಗು ನಾಳೆ! ಇಂದಿಂದೆ!

ಸಿದ್ಧಾರ್ಥನು 'ಇಲ್ಲ; ಇನ್ನಿಲ್ಲಿ ಇರಲಾರೆ, ಇರಲಾರೆ!... ಭೋಗಾಭಿಲಾಷೆಯಿಂದಿನ್ನು ನಾನಿರಲಾರೆ... ನಾಳೆ ಎಂದಿಗು ನಾಳೆ! ಇಂದಿಂದೆ' ಎಂದು ಎಲ್ಲವನ್ನು ಆ ರಾತ್ರಿ ತೊರೆದು ಹೋಗಲು ನಿರ್ಧರಿಸುತ್ತಾನೆ. ಅವನ ವೃದ್ಧ ಸೇವಕ ಚನ್ನನು ಬಂದು 'ನಿನಗೊಂದು ಗಂಡು ಶಿಶು ಹುಟ್ಟಿದೆ' ಎಂಬ ಶುಭವಾರ್ತೆ ತಿಳಿಸುವನು. ಆಗ ಸಿದ್ಧಾರ್ಥನು 'ಮತ್ತೊಂದು ಪಾಶ. ಕಬ್ಬಿಣದ ಸರಪಣಿಯ ಬಂಧನ!... ಬಿಚ್ಚಿ ಬಿಡುವುದು ಎಂಬ ನೆಚ್ಚನಾ ಕಾಣೆ.' ಎಂದು ಹೇಳುವನು.

'ಇಲ್ಲಿ ಸೊಗಮಿಲ್ಲವೇ ನಿನಗೆ' ಎಂಬ ಚನ್ನಜ್ಜನ ಪ್ರಶ್ನೆಗೆ ತನ್ನ ನಿರ್ಧಾರದ ಹಿಂದಿನ ಉದ್ದೇಶ ಹೀಗೆ ಸ್ಪಷ್ಟಪಡಿಸುವನು:

'ಚನ್ನಜ್ಜ ನಾನೊಬ್ಬ ಸುಖಿಯಾದರೇನಾಯ್ತು?
ಲೋಕವೇ ಬೊಬ್ಬಿರಿಯುತಿಹುದಲ್ಲ ಬೆಂದು
ಬಡತನದಲ್ಲಿ. ಮೌಢ್ಯಾಂಧಕಾರದೊಳು
ಸಿಕ್ಕಿ, ದಾರಿಯ ತಪ್ಪಿ, ಕಾಡುಪಾಲಾಗಿಹಳು
ಭಾರತಾಂಬೆಯು, ಚನ್ನ, ಕಾಡುಪಾಲಾಗಿಹಳು!'

ಅವನು ಚನ್ನನೊಂದಿಗೆ ಮಾತಾಡುತ್ತ– ಮುದುಕ, ರೋಗಿ, ಸತ್ತವನನ್ನು ಹಾಗೂ ಯೋಗಿಯನ್ನು ಕಂಡ ದಿನದಿಂದ ತಾನು ಬುದ್ಧನಾಗಲು ಹಂಬಲಿಸಿರುವುದನ್ನು ತಿಳಿಸುವನು. ಹಿಂದೆ ರಾಜ್ಯವನ್ನು ಅಗಲುವ ದಿನವೇ ಮದುವೆ ಬಂದ ಕಾರಣ ನಿಂತು, ಇಂದು ಸುತನ ಉದಯದ ದಿನ ತನ್ನ ವೈರಾಗ್ಯದ ನಡೆ ಖಚಿತವೆಂದು ಹೇಳುವನು. ತನ್ನ ನೆಚ್ಚಿನ ಕುದುರೆ ಕಂಥಕನನ್ನು ಕಡಿವಾಣ ಹಾಕದೆ ಕರೆತಂದು, ಪಶ್ಚಿಮ ದ್ವಾರದಲ್ಲಿ ಕಾಯಲು ತಿಳಿಸುವನು.

### ವ್ಯಾಮೋಹವೇ, ಸಾಯಿ! ವೈರಾಗ್ಯವೇ ಕಾಯಿ!

ಸಿದ್ಧಾರ್ಥನು ಅರಮನೆಯ ಒಂದು ಕೋಣೆಯಲ್ಲಿ 'ವ್ಯಾಮೋಹವೇ, ಸಾಯಿ! ವೈರಾಗ್ಯವೇ ಕಾಯಿ!... ಮಾಯೆಯನು ದೂಡು. ಶಕ್ತಿಯನು ನೀಡು!' ಎಂದು ಧ್ಯಾನಿಸುತ್ತಾನೆ. ಕೈಲಾಸನೆಂಬ ಹೆಸರಿನ ಪಹರಿ ಬರಲು, ಅವನಿಗೆ ತನ್ನ ಆಭರಣಗಳನ್ನು ಕೊಡುತ್ತಾನೆ. ಜಗದ ಕತ್ತಲೆ ಅಳಿಸಲು ಬೆಳಕನ್ನು ಹೀಗೆ ಆಹ್ವಾನಿಸುತ್ತಾನೆ:

'ಬಾ, ಬೆಳಕೆ, ಬಾ ಬೇಗ.
ನೀನು ಹೊರಗಿನ ಬೆಳಕು;
ಜ್ಞಾನ ಒಳಗಿನ ಬೆಳಕು...
ಎಲೆಲೆ ಹೊರಗಿನ ಬೆಳಕೆ, ಒಳಗಿನಾ ಬೆಳಕ
ಪಡೆಯಲು ಹೋಗುತಿಹೆನು, ನೆರವಾಗು.
ಬಾ ಬೆಳಕೆ, ಬಾ ಬೇಗ.'

ಅವನು ಹಾಗೆ ನಿರಂತರ ಧ್ಯಾನ ಮತ್ತು ಮಾನವ ಪ್ರೇಮದಿಂದ ಆಂತರ್ಯದ ಜ್ಯೋತಿಯನ್ನು ದೇದೀಪ್ಯಮಾನವಾಗಿಸಿಕೊಂಡಿದ್ದು ಲೋಕ ಕಲ್ಯಾಣದ ಚಿಂತನೆಯಿಂದ ಜಗದ ಬೆಳಕಾದ.

### ಮುದ್ದಿನ ಕೆಂಡ

ಸಿದ್ಧಾರ್ಥನು ಒಂದೇ ಒಂದು ಸಲ ಹೋಗಿ ಕಣ್ಣೆನಾಸೆಯ ತಣಿಸಿ ಬರುವೆನು ಎಂದು ಹೆಂಡತಿ ಮಗನನ್ನು ನೋಡಲು– ಅವರಿಗೆ ನಿದ್ದೆ ಆವರಿಸಿರುವಾಗ ಹೋಗುವನು. ತನ್ನ ಒಡಲ ಕುಡಿ ರಾಹುಲನನ್ನು ನೋಡಿ 'ಅಲ್ಲಿಹುದು ಎನ್ನ ಮುದ್ದಿನ ಕೆಂಡ! ಮುಟ್ಟಲಾರೆನು; ಮುಟ್ಟಿದರೆ ಸುಟ್ಟುಬಿಡುವೆ' ಎಂದುಕೊಳ್ಳುವನು. ನಾಟಕಕಾರರು 'ಮುದ್ದಿನಕೆಂಡ' ರೂಪಕದಲ್ಲಿ ಆ ಎಳೆ ಮುದ್ದು ಕುವರ ಫಳಫಳ ಹೊಳೆಯುವುದನ್ನು ಹೇಳುತ್ತಲೆ, ಪುತ್ರ ವಾತ್ಸಲ್ಯದಿಂದ ಹೃದಯ ಮರುಗಿ ತನ್ನ ವೈರಾಗ್ಯವನ್ನು ಸುಡುವ ಸಾಧ್ಯತೆಯನ್ನು ಧ್ವನಿಸಿದ್ದಾರೆ.

ಅವನು ಕೂಸಿಗೆ ಮುತ್ತಿಡುತ್ತ ಹೇಳುತ್ತಾನೆ:

'ಸಂನ್ಯಾಸಿಯೀಯುತಿಹೆ ನಿಷ್ಕಾಮ ಚುಂಬನ,
ಪರಮಾತ್ಮನೀಯುತಿಹ ಮಂಗಳದ ಮುತ್ತು!'

ಸಂಸಾರದ ಬಂಧನದಿಂದ ಮುಕ್ತನಾಗಿ ಪರಿವ್ರಾಜಕತೆಯತ್ತ ಮುಖ ಮಾಡಿದವನು ಮಗನಿಗೆ ನೀಡಿದ ಮುತ್ತು– ಆಸೆ ಆಕಾಂಕ್ಷೆ ವ್ಯಾಮೋಹಗಳಿಂದ ಮುಕ್ತವಾದ 'ನಿಷ್ಕಾಮ ಚುಂಬನ'. ಅನಂತರ ಹೆಂಡತಿ ಯಶೋಧರಾಳನ್ನು ನೋಡಿ,

'ನಿದ್ರಿಸು, ಯಶೋಧರಾ ನಿದ್ರಿಸೆಲೆ ತಾಯಿ; ಇಂದು ನಾ ನಿನ್ನ ಸುತ, ಪತಿಯಲ್ಲ, ಪತಿಯಲ್ಲ!' ಎಂದು ಹೇಳಿ ಹೊರಡುತ್ತಾನೆ.

### ಕಡಲಾಗಿ ಹಿಂತಿರುಗಲೆಂದೇ ಹನಿಯಾಗಿ ಹೊರಟಿಹೆನು

ನಾಟಕಕಾರರು ಸಿದ್ಧಾರ್ಥನು ತನ್ನ ಆಲೋಚನೆಯಲ್ಲಿ ಗಟ್ಟಿಗೊಂಡು ದೃಢಚಿತ್ತನಾಗಿರುವುದನ್ನು ಅವನ ಸ್ವಗತದಲ್ಲಿ ಹೀಗೆ ನೀಡಿದ್ದಾರೆ:

'ಹನಿಯಿಂದ ಸಾಗರಕೆ ಹಾರಲೈ ಧೀರಾತ್ಮ!
ಛವಿಯಿಂದ ರವಿಯೊಳೊಂದಾಗಲೈ ವೀರಾತ್ಮ!'

ಅವನು ಕಪಿಲವಸ್ತುವಿಗೆ, ಅರಮನೆಗೆ ವಂದಿಸಿ, ತಂದೆ ತಾಯಿ, ಪತ್ನಿ ಪುತ್ರ, ರಾಜ್ಯ ಪ್ರಜೆಗಳ ವ್ಯಾಮೋಹದಿಂದ ಕಳಚಿಕೊಂಡು ಅಂತರಂಗದಲ್ಲಿ ತ್ಯಾಗ ಪ್ರಕ್ರಿಯೆಗೆ ಒಳಗಾಗುತ್ತಾನೆ.

ಸಿದ್ಧಾರ್ಥನು ತನ್ನ ಮನೋನಿಶ್ಚಲತೆಯಿಂದ ಸಾಗುತ್ತಿರುವಾಗ ಮೋಹಿನಿಯ ಹಿರಿಯ ಮಗ ಮಾರ ಎದುರಾಗುತ್ತಾನೆ. ಅವನು– ನಿನ್ನದು ಒಣಗು ವೇದಾಂತ, ಜಡರ ಸಿದ್ಧಾಂತವೆಂದು, ಕೈಲಿರುವ ರನ್ನವು ಶರಧಿಯ ಸಿರಿಗೆ ಮಿಗಿಲೆಂದು ವಾದಿಸುತ್ತಾನೆ. ಶಾಂತಚಿತ್ತದ ಸ್ಥಿತಪ್ರಜ್ಞ ಸಿದ್ಧಾರ್ಥನು ಹೇಳುವುದು ಹೀಗೆ:

'ತರ್ಕ ತಾಂ ಬುದ್ಧಿಯಂ ಮೀರಲರಿಯದು, ಮಾರ!
ಬುದ್ಧಿಯಾಚೆಯ ಮೇಲೆ ಸಿದ್ಧಿಯೂರೆಂದು ತಿಳಿ'

ಚತುರ್ವಿಧ ಪುರುಷಾರ್ಥಗಳಲ್ಲಿ ಅರ್ಥ ಮತ್ತು ಕಾಮದ ದಾಸ ಮಾರ. ಲೋಕಸತ್ಯದ ಶೋಧದಲ್ಲಿ ತೊಡಗಿದ ಸಿದ್ಧಾರ್ಥನದು ಧರ್ಮ ಮತ್ತು ಮೋಕ್ಷದ ಸಾಧನಾ ಧ್ಯಾನ. ಮಾನವಜೀವ ಕಲ್ಯಾಣಮುಖಿಯಾದದ್ದು ಧರ್ಮ. ಅದೇ ಮೋಕ್ಷ. ಅದೇ ಗೌತಮ ಎಂದು ತಿಳಿದ ಮಾರ ಹೇಳುತ್ತಾನೆ: 'ಗೌತಮಾ! ಧರ್ಮ ಮೋಕ್ಷವೆ ನೀನು; ನಾನು ಕಾಮಾರ್ಥ!'

### ಅದನರಿಯೆ ಹೊರಟಿಹೆನು

ಸಿದ್ಧಾರ್ಥನು ಲಾಯದ ಆಳು ರಾಲನಿಗೆ ವಸ್ತ್ರಗಳನ್ನು ನೀಡುತ್ತಾನೆ. ಚನ್ನಜ್ಜ ತಂದ ತನ್ನ ಕುದುರೆ ಕಂಥಕನನ್ನು ಏರುತ್ತಾನೆ. ಚನ್ನಜ್ಜ ಇನ್ನೊಂದು ಕುದುರೆ ಏರಿ ಜೊತೆಗೆ ಸಾಗುತ್ತಾನೆ. ಕಪಿಲವಸ್ತುವಿಗೆ ಬಹುದೂರದ ಕೋಲಿ ದೇಶ ದಾಟಿ ಬಂದಾಗ ಚನ್ನಜ್ಜ ದಣಿದಿರುತ್ತಾನೆ. ತಂದೆಯಂತೆ ಒಲಿದಿರುವ ಅವನಿಗೆ ತನ್ನ ಒಡವೆಗಳನ್ನು ನೀಡಿ ಹಿಂದಿರುಗಲು ಹೇಳುತ್ತಾನೆ. ಒಬ್ಬನೇ ಮುಂದೆ ಸಾಗುತ್ತಾನೆ. ಅನಂತರ ಅನುಮಾ ಹೊಳೆಯ ದಂಡೆಯಲ್ಲಿ ನಿಂತು ಕುದುರೆ ಕಂಥಕನೊಡನೆ ಮಾತಾಡುತ್ತ 'ವೈರಾಗ್ಯ ಯಜ್ಞಕ್ಕೆ ಬಲಿಯಾಗಲೆಂದುಳಿದ ಕಡೆಯ ಸಂಗವು ನೀನು' ಎಂದು ಹೇಳಿ ಕಪಿಲವಸ್ತುವಿಗೆ ಹಿಂದಿರುಗಲು ಬಿಟ್ಟುಬಿಡುವನು. ಪೂರ್ವಾಶ್ರಮದ ಸಂಬಂಧ ಕಳೆದುಕೊಳ್ಳಲು ಅನುಮಾ ನದಿಯ ದಡದ ಬಂಡೆಯ ಮೇಲೆ ಕೂದಲು ಕತ್ತರಿಸಿಕೊಳ್ಳುವನು.

ಸೂರ್ಯೋದಯದ ಬೆಳಕನ್ನು ಕಂಡು ಹಿಗ್ಗುವನು. ಅಲ್ಲಿ ಕಂಡ ಭಿಕ್ಷುಕನಿಗೆ 'ಬಡ ವಸ್ತ್ರಗಳ ನೀಡು, ಸಿರಿಯ ಕೇತನಗಳಿವು ತೆಗೆದುಕೊ; ನೋಡು!' ಎಂದು ಹೇಳಿ ಕೊಡುವನು. ಆಗ ಭಿಕ್ಷುಕ ಮತ್ತು ಸಿದ್ಧಾರ್ಥನ ನಡುವಿನ ಪ್ರಶ್ನೆ–ಉತ್ತರ, ಮನುಕುಲದ ಎಲ್ಲ ಕಾಲದ ಹುಡುಕಾಟವನ್ನು ಸೂಚಿಸುವಂತಿದೆ.

ಭಿಕ್ಷುಕ: 'ಮಹಾತ್ಮಾ ನೀನಾರು?'

ಸಿದ್ಧಾರ್ಥ: 'ಅದನರಿಯೆ ಹೊರಟಿಹೆನು.'

ಪ್ರತಿಕ್ರಿಯಿಸಿ: feedback@sudha.co.in

